## ಸುದ್ದಿ ಸಂಚಯ







# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು (ಜುಲೈ-೨೦೨೪)

### ಶಾಖಾ ಕೇಂದ್ರಗಳ ಚಟುವಟಿಕೆಗಳು : ಭಾರತದಲ್ಲಿ

ಜುಲೈ ೪ರಂದು **RKMVERI** (ಖಾಸಗಿ ವಿಶ್ವವಿದ್ಯಾನಿಲಯ)ದ ವಾರ್ಷಿಕ ಘಟಿಕೋತ್ಸವವು ಬೇಲೂರು ಮಠದಲ್ಲಿರುವ ಪ್ರಧಾನ ಕ್ಯಾಂಪಸ್‌ನಲ್ಲಿ ನಡೆಯಿತು. ನರೇಂದ್ರಪುರ ಹಾಗೂ ರಾಂಚಿಯಲ್ಲಿರುವ ಕೇಂದ್ರಗಳಲ್ಲೂ ಇದರ ಅಂಗವಾಗಿ ಕಾರ್ಯಕ್ರಮಗಳು ನಡೆದವು. ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಸುವೀರಾನಂದಜಿಯವರು ಇದರಲ್ಲಿ ಭಾಗವಹಿಸಿ ಮಾತನಾಡಿದರು. ೨೯೩ ಮಂದಿ ಪದವಿ ಹಾಗೂ ಡಿಪ್ಲೊಮಾ ವಿಜೇತರು ಪ್ರಮಾಣಪತ್ರ ಪಡೆದರು.

**ಸಿಕ್ರಾ-ಕುಲೀನಗ್ರಾಮ** ಕೇಂದ್ರದಲ್ಲಿ ಜುಲೈ ೭ರಂದು (ರಥಯಾತ್ರೆಯ ದಿನ) ನಡೆದ ಕಾರ್ಯಕ್ರಮದಲ್ಲಿ ಪರಮಾಧ್ಯಕ್ಷ ಸ್ವಾಮೀಜಿಯವರು ಶ್ರೀರಾಮಕೃಷ್ಣದೇವಾಲಯದ ಶಯನಗೃಹವನ್ನು ಉದ್ಘಾಟಿಸಿದರು. ಅಂತೆಯೇ ಸಾಧುನಿವಾಸದ ನವೀಕೃತ ಅಡುಗೆಶಾಲೆ ಹಾಗೂ ಭೋಜನಾಲಯವನ್ನು ಕೂಡ ಉದ್ಘಾಟಿಸಿದರು. ೧೬೫ ಮಂದಿ ಸಂನ್ಯಾಸಿಗಳು ಹಾಗೂ ೨೦೦೦ ಮಂದಿ ಭಕ್ತರು ಭಾಗವಹಿಸಿದ್ದರು. ಪ್ರಧಾನಕಾರ್ಯದರ್ಶಿಯವರು **ಪುರುಲಿಯಾ** ಕೇಂದ್ರದಲ್ಲಿ ನೂತನ 'ವಿಚಾರಸಂಕಿರಣ ಸದನ'ವನ್ನು ಜುಲೈ ೨೪ರಂದು, ಹಾಗೂ **ಅಸನ್ಸೋಲ್** ಕೇಂದ್ರದಲ್ಲಿ ಜುಲೈ ೨೫ರಂದು ಆಸ್ಪತ್ರೆಯ ಹೊಸ ೩ ಅಂತಸ್ತಿನ ಹೆಚ್ಚುವರಿ ಕಟ್ಟಡವನ್ನು ಉದ್ಘಾಟಿಸಿದರು.

ಅಗರ್ತಲಾದ **ಥಾಲೇಶ್ವರ** ಕೇಂದ್ರದಲ್ಲಿ ಜುಲೈ ರಂದು ಉಪಾಧ್ಯಕ್ಷರಾದ ಪೂಜ್ಯ ಸ್ವಾಮಿ ದಿವ್ಯಾನಂದರು ವಿವೇಕಾನಂದ ಸಭಾಂಗಣವನ್ನು ಉದ್ಘಾಟಿಸಿದರು.

**ಹೈದರಾಬಾದ್** ಕೇಂದ್ರದ ಸುವರ್ಣ ಮಹೋತ್ಸವದ (೧೯೭೩-೨೦೨೩) ಅಂಗವಾಗಿ ಒಂದು ದಿನದ ಕಾರ್ಯಕ್ರಮವು ಜುಲೈ ೨೭ ರಂದು ನಡೆಯಿತು. ''ಭಾರತದ ಶೈಕ್ಷಣಿಕ ದರ್ಶನ ಹಾಗೂ ಇದರಲ್ಲಿ ಶಿಕ್ಷಣ ತಜ್ಞರ ಪಾತ್ರ'' ಎಂಬ ವಿಷಯವನ್ನು ಕುರಿತ ಕಾರ್ಯಾಗಾರ ನಡೆದಿದ್ದು, ಇದರಲ್ಲಿ ೧೧೦೦ ಮಂದಿ ಶಿಕ್ಷಣತಜ್ಞರು ಹಾಗೂ ೬೦೦ ಮಂದಿ ಭಕ್ತರು ಭಾಗವಹಿಸಿದ್ದರು.

**ರಾಂಚಿ ಮೊರಾಬಾದಿ** ಕೇಂದ್ರವು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನೀಡಿರುವ ಕೊಡುಗೆಗೋಸ್ಕರ ರಾಂಚಿಯ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ಈ ಕೇಂದ್ರವನ್ನು ಗೌರವಿಸಿದೆ.

**ಹತಮನಿಗುಡ** ಕೇಂದ್ರವು ಜುಲೈ ೬ ರಂದು ೪೦೦ ಗಿಡಗಳನ್ನು ನೆಡುವ ಮೂಲಕ ವನಮಹೋತ್ಸವವನ್ನು ಆಚರಿಸಿದೆ.

ಪುರಿ ಜಗನ್ನಾಥ ರಥೋತ್ಸವದಂದು **ಪುರಿ ಮಠವು** ಜುಲೈ ೭ರಿಂದ ೧೬ರ ವರೆಗೆ ೪೧,೨೦೦ ಯಾತ್ರಿಕರಿಗೆ ನಿಂಬೆ ಪಾನೀಯವನ್ನು ವಿತರಿಸಿದೆ. **ಪುರಿ ಮಿಷನ್ ಆಶ್ರಮ** ಕೂಡ ೧೨,೦೦೦ ಮಂದಿ ಯಾತ್ರಿಕರಿಗೆ ನಿಂಬೆ ಪಾನೀಯವನ್ನು ವಿತರಿಸಿದೆ. **ಅಹಮದಾಬಾದ್** ಕೇಂದ್ರವು ನಗರದಲ್ಲಿ ನಡೆದ ರಥಯಾತ್ರೆಯಲ್ಲಿ ಭಾಗವಹಿಸಿದ ೭೦೦೦ ಭಕ್ತರಿಗೆ ಶಕ್ತಿವರ್ಧಕ ಪಾನೀಯ ಹಾಗೂ ಕುಡಿಯುವ ನೀರನ್ನು ವಿತರಿಸಿದೆ.

**ನರೇಂದ್ರಪುರ** ಕೇಂದ್ರವು ಜುಲೈ ೧೩-೧೪ರಂದು ನಡೆಸಿದ ಫುಟ್‌ಬಾಲ್ ಸ್ಪರ್ಧೆಯಲ್ಲಿ ೧೫ ತಂಡಗಳು ಭಾಗವಹಿಸಿದ್ದವು. **ಝಾರ್‌ಗ್ರಾಮ** ಕೇಂದ್ರವು ಜುಲೈ ೧೯ರಿಂದ ೨೮ರ ವರೆಗೆ ನಡೆಸಿದ ಯೋಗಾಸನ ಸ್ಪರ್ಧೆಯಲ್ಲಿ ಝಾರ್‌ಗ್ರಾಮ ಜಿಲ್ಲೆಯ ೮ ಘಟಕಗಳು ಭಾಗವಹಿಸಿದ್ದವು. ೩೪೩ ಮಂದಿ ಭಾಗವಹಿಸಿದ್ದರು.

**ಮೌಲ್ಯಶಿಕ್ಷಣ ಕಾರ್ಯಕ್ರಮಗಳು:** ಗುರುಗ್ರಾಮ, ಜಮ್ಮು, ರಾಜಮಹೇಂದ್ರವರಂ, ರಾಜ್‌ಕೋಟ್, ತಂಜಾವೂರು ಹಾಗೂ ಯಾದಾದ್ರಿ-ಭುವನಗಿರಿ ಕೇಂದ್ರಗಳು ವಿವಿಧ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಿವೆ.

**ಯುವ ಸಮ್ಮೇಳನಗಳು:** ಬಸವನಗುಡಿ, ಕಟಕ್, ಹೈದರಾಬಾದ್, ರಾಯಪುರ, ಶಿಲ್ಲಾಂಗ್ ತಾಮ್‌ಲುಕ್, ತಂಜಾವೂರು ಹಾಗೂ ವಿವೇಕನಗರ ಕೇಂದ್ರಗಳು ವಿವಿಧ ಯುವ ಸಮ್ಮೇಳನಗಳನ್ನು ನಡೆಸಿವೆ.

**ನೇತ್ರ ಚಿಕಿತ್ಸೆ ಹಾಗೂ ವೈದ್ಯಕೀಯ ಸೇವಾ ಶಿಬಿರಗಳು:** ಜೂನ್ ಹಾಗೂ ಜುಲೈ ತಿಂಗಳಲ್ಲಿ ಅಸನ್ಸೋಲ್, ಬಜೇಪ್ರತಾಪಪುರ, ಬಾಂಕುರ, ಚೆನ್ನೈ ಮಠ, ಕೊಯಂಬತ್ತೂರು ಮಿಷನ್, ಗುವಹಾತಿ, ಹತಮನಿಗುಡ, ಜಮ್ಮು, ಕಾಲಡಿ, ಕೊಯಲಾಂಡಿ, ಲಕ್ನೋ, ಮದುರೈ, ಮಾನಸದ್ವೀಪ, ನಟ್ಟರಾಂಪಳ್ಳಿ, ಪೋರ್‌ಬಂದರ್, ಪುರಿ ಮಠ, ರಾಜಮಹೇಂದ್ರವರಂ, ರಾಂಚಿ ಮೊರಾಬಾದಿ, ತಂಜಾವೂರು, ತಿರುಮಕೂಡಲ್ ಕೇಂದ್ರಗಳು ವಿವಿಧ ನೇತ್ರ ಹಾಗೂ ವೈದ್ಯಕೀಯ ಶಿಬಿರಗಳನ್ನು ನಡೆಸಿವೆ.




Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020